# ‘ನಳಚರಿತೆ’ಯಲ್ಲಿ ಅಲಂಕಾರ ಪ್ರಸ್ಥಾನ

**ಡಾ.ಹೆಚ್.ಮಲ್ಲಿಕಾರ್ಜುನ**
**ಮುಖ್ಯಸ್ಥರು**
**ಕನ್ನಡ ಅಧ್ಯಯನ ವಿಭಾಗ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೋಕ.**

ಪುರಂದರದಾಸರು ಮತ್ತು ಕನಕದಾಸರು ವ್ಯಾಸರಾಯರ ಶಿಷ್ಯರಾಗಿ ದಾಸ ಸಾಹಿತ್ಯದ ಆಗಸದಲ್ಲಿ ಮಿನುಗಿದ ಜೋಡು ನಕ್ಷತ್ರಗಳು ಇವರಲ್ಲಿ ಕನಕದಾಸರು ಹರಿದಾಸರಲ್ಲಿಯೇ ಶ್ರೇಷ್ಠರಾದಂತಹ ಕವಿಗಳಾಗಿಯೂ ಅತ್ಯಂತ ವಿಶಿಷ್ಟ ಸ್ಥಾನವನ್ನು ಹೊಂದಿರುವವರು ದಾಸ ಸಾಹಿತ್ಯಕ್ಕೆ ಅತ್ಯಮೂಲ್ಯ ಕಾಣಿಕೆಯನ್ನು ನೀಡಿದ ಕನಕದಾಸರು ಸುಮಾರು ಕ್ರಿ.ಶ ೧೫೦೮ ರಲ್ಲಿ ಇಂದಿನ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ದಂಪತಿಗಳಿಗೆ ತಿರುಪತಿಯ ಶ್ರೀನಿವಾಸನ ದಯೆಯಿಂದ ಜನಿಸಿದರು ಎಂಬ ಉಲ್ಲೇಖವಿದೆ. ಕನಕದಾಸರ ಮೂಲ ಹೆಸರು ತಿಮ್ಮಪ್ಪ. ಇವರ ತಂದೆ ತಿಮ್ಮಪ್ಪನಿಗೆ ರಾಮಾಯಣ, ಮಹಾಭಾರತ, ಭಾಗವತ, ವ್ಯಾಕರಣ, ಕಾವ್ಯ ಮೀಮಾಂಸಶಾಸ್ತ್ರ, ಛಂದಸ್ಸು, ಅಲಂಕಾರ ಮುಂತಾದವುಗಳನ್ನು ಬಾಲ್ಯದಲ್ಲಿಯೇ ಕಲಿಸಿದರು ಎಂದು ಹೇಳಲಾಗಿದೆ. ಅಪೂರ್ವ ವ್ಯಕ್ತಿತ್ವವನ್ನು ಹೊಂದಿದ್ದ ಕನಕದಾಸರು ಭಾವಪೂರ್ಣ ಕೀರ್ತನೆಗಳನ್ನು ರಚಿಸಿದ್ದರಲ್ಲದೆ ಮೋಹನ ತರಂಗಿಣಿ, ರಾಮಾಧ್ಯಾನ ಚರಿತ್ರೆ, ನಳಚರಿತ್ರೆ, ಹರಿಭಕ್ತಿಸಾರ, ನೃಸಿಂಹಸ್ತವ ಎಂಬ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಮುಂಡಿಗೆಗಳು, ಸುಳಾದಿಗಳು, ಉಗಾಭೋಗಗಳು ಇವರ ವೈಶಿಷ್ಟ್ಯಪೂರ್ಣ ರಚನೆಗಳು ತಿಮಪ್ಪನು ತನ್ನ ತಂದೆ ಬೀರಪ್ಪನ ಆಕಸ್ಮಿಕ ಸಾವಿನ ನಂತರ ಅಧಿಕಾರದ ಜವಾಬ್ದಾರಿಯನ್ನು ವಹಿಸಿಕೊಂಡು ಸಮರ್ಥವಾಗಿ ನಿಭಾಯಿಸಿ ಜನಮೆಚ್ಚುಗೆಯನ್ನು ಗಳಿಸಿದರು. ಅನಿರೀಕ್ಷಿತವಾಗಿ ಜೀವನದಲ್ಲಿ ಬಂದೊದಗಿದ ಕಷ್ಟಗಳು ಕನಕದಾಸರಲ್ಲಿ ವೈರಾಗ್ಯ ಮೂಡಿ ವ್ಯಾಸರಾಯರ ಬಳಿ ದೀಕ್ಷೆ ಪಡೆದು ದಾಸರಾಗಿ ಪರಿವರ್ತಿತರಾದರು. ಕನಕದಾಸರು ಎಲ್ಲ ಧರ್ಮಗಳ ಬಗ್ಗೆಯು ಕಾಳಜಿ ಹೊಂದಿದವರಾಗಿದ್ದರೂ ಶೈವ, ವೈಷ್ಣವ, ಮಾಧ್ವ ಮತಗಳ ಭಕ್ತಿ–ಭಾವಕ್ಕೆ ಮನಸೋತರು ಮನುಷ್ಯ ಜಾತಿ ತಾನೊಂದೆ ವಲಂ ಎನ್ನುವ ತತ್ವವನ್ನು ಬದುಕಿ ತೋರಿಸಿದ ಕಲಿಯೂ ಕವಿಯೂ ಆಗಿ ಮೆರೆದ ಧೀಮಂತ ನಾಯಕ ಕನಕದಾಸರು. ಕನಕದಾಸರು ರಚಿಸಿರುವ ಕೃತಿಗಳಲ್ಲಿ ನಳಚರಿತ್ರೆಯೂ ಒಂದು. ಈ ಕೃತಿಯು ಕನಕದಾಸರ ಕಾವ್ಯಗಳಲ್ಲಯೇ ಬಹಳ ಜನಪ್ರಿಯವಾದ ಕಾವ್ಯ. ಇದರಲ್ಲಿ ನಳದಮಯಂತಿಯರ ಆದರ್ಶ ಪ್ರೇಮ ಒಡಮೂಡಿದೆ. ‘ವರಪುರದ ಚೆನ್ನಿಗರಾಯ’ನ ಅಂಕಿತದೊಂದಿಗೆ ಮೂಡಿಬಂದ ಈ ಕಾವ್ಯ ತತ್ವಪ್ರಧಾನವಾದ, ಸೊಗಸಾದ, ಲೌಕಿಕ ಕಾವ್ಯವಾಗಿದೆ. ನಳ ಚರಿತ್ರೆಯ ಕಥಾವಸು್ತ ಹರಿದಾಸ ಸಾಹಿತ್ಯದಲ್ಲಿ ಕನಕದಾಸರ ಹೆಸರು ವೈಶಿಷ್ಟಪೂರ್ಣವಾದುದು. ಹರಿದಾಸರಲ್ಲಿ ಕಾವ್ಯ ರಚನೆ ಮಾಡಿದ ಶ್ರೇಷ್ಠ ದಾಸರೆಂದರೆ ಕನಕದಾಸರು ಎಂಬ ಖ್ಯಾತಿ ಕನಕದಾಸರಿಗೆ ಅರ್ಥಪೂರ್ಣವಾಗಿ ಸಲ್ಲುತ್ತದೆ. ಕನಕದಾಸರು ರಚಿಸಿದ ನಳಚರಿತ್ರೆಯು ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆಶಯವನ್ನು ಹೊಂದಿದೆ. ನಳದಮಯಂತಿಯರು ಪ್ರೇಮ ಸಂದೇಶವನ್ನು ಸಾರುವ ದಂಪತಿಗಳಾಗಿದ್ದು, ಈ ದಾಂಪತ್ಯ ಜೀವನದಲ್ಲಿ ಎದುರಾಗುವ ಅನೇಕ ಕಷ್ಟಗಳಿಗೆ ಸಾಕ್ಷಿಯಾಗಿದ್ದಾರೆ. ಕನಕದಾಸರ ನಳಚರಿತ್ರೆಯು ಒಂಭತ್ತು (೦೯) ಸಂಧಿಗಳನ್ನುಳ್ಳ ನಾಲ್ಕುನೂರ ಎಂಭತ್ತೊಂದು (೪೮೧) ಭಾಮಿನಿ ಷಟ್ಪದಿಗಳಲ್ಲಿ ರಚಿತವಾದ ಹಾಗೂ ತೀರಾ ಚಿಕ್ಕ ಕಥಾವಸ್ತುವನ್ನೊಳಗೊಂಡ ಖಂಡ ಕಾವ್ಯವಾಗಿದೆ. ಕನ್ನಡ ಕಾವ್ಯಪರಂಪರೆಯಲ್ಲಿ ಇದೊಂದು ಅತ್ಯುತ್ತಮವಾದ ಕಥನ ಕಾವ್ಯ ಮೂಲತಃ ಬಹು ಜನಪ್ರಿಯವಾದ ಪ್ರೇಮ ಕಾವ್ಯ. ನಿಷಧಪುರದ ಚಕ್ರವರ್ತಿ ವೀರಷೇನನ ಮಗ ‘ನಳನೃಪ’ ಸುಂದರನೂ, ಗುಣವಂತನೂ, ಕಲಿಪುರುಷನ ಪ್ರಭಾವಕ್ಕೆ ಒಳಗಾಗಿ ವನವಾಸ, ಅಜ್ಞಾತವಾಸಗಳನ್ನು ಅನುಭವಿಸಿ ಹಲವು ಕಷ್ಟಕೋಟಲೆಗಳನ್ನು ದಾಟಿ

ಕೊನೆಗೆ ತನ್ನ ಸಕಲ ರಾಜ್ಯವನ್ನು ಪಡೆದು ದಮಯಂತಿಯೊಂದಿಗೆ ರಾಜ್ಯಭಾರ ಮಾಡುತ್ತಾನೆ. ಪರಿಮಿತ ಗಾತ್ರದ ಕಥಾವಸ್ತುವನ್ನು ಕವಿ ಕನಕದಾಸರು ಕಾವ್ಯಾತ್ಮಕವಾಗಿ, ಸಾ ್ವರಸ್ಯಪೂರ್ಣವಾಗಿ ಪ್ರಸ್ತುತಪಡಿಸಿರುವುದು ಅವರ ಕವಿತ್ವಕ್ಕೆ ಹಿಡಿದ ರನ್ನಗನ್ನಡಿಯಂತಿದೆ. ಕಥೆಯ ಓಟಕ್ಕೆ ಅಡ್ಡಿಯನ್ನುಂಟುಮಾಡುವ ಅನಾವಶ್ಯಕ ವರ್ಣನೆ ಸನ್ನಿವೇಶಗಳನ್ನು ತಂದಿಲ್ಲ. ಅಷ್ಟಾದಶ ವರ್ಣನೆ, ಹಿಡಿತಕ್ಕೊಳಪಡದ ಕಥಾವಸ್ತು, ಕೋಲಾಹಲಕರವಾದ ಘಟನೆ, ವಿಸ್ಮಯಕಾರಿಯಾದ ಪ್ರಸಂಗ, ಭಯಂಕರವಾದ ಸನ್ನಿವೇಶ, ಶೃಂಗಾರಾದಿ ಸಕಲ ರಸಗಳ ನಿರೂಪಣೆಯ ವ್ಯಾಮೋಹ ಇತ್ಯಾದಿಗಳಿಗೆ ‘ನಳಚರಿತ್ರೆ’ಯಲ್ಲಿ ಸಾಕಷ್ಟು ಅವಕಾಶಗಳಿದ್ದರೂ ಸಂಯಮಶೀಲರಾದ ಕನಕದಾಸರು ಇವುಗಳ ವ್ಯಾಮೋಹಕ್ಕೆ ಒಳಗಾಗದೆ ಇವೆಲ್ಲವುಗಳಿಂದ ’ ಮುಕ್ತರಾಗಿದ್ದಾರೆ. ಅಲಂಕಾರಗಳ ಕುರಿತು ಸಂಕ್ಷಿಪ್ತ ಪರಿಚಯ ಕಾವ್ಯದ ಶೋಭೆಯನ್ನು ಹೆಚ್ಚಿಸುವಲ್ಲಿ ಅಲಂಕಾರದ ಪಾತ್ರ ಮಹತ್ತರವಾದುದು. ಕಾವ್ಯ ಸ್ವರೂಪವನ್ನು ಕುರಿತು ಆಲೋಚಿಸಿದ ಭಾರತೀಯ ಲಾಕ್ಷಣಿಕರೆಲ್ಲರೂ ಅಲಂಕಾರವನ್ನು ಕುರಿತು

ಸಾಕಷ್ಟು ವಿವರ ನೀಡಿದ್ದಾರೆ. ಕಾವ್ಯದ ಸೊಬಗು ಕಾವ್ಯಭಾಷೆಯಲ್ಲಿರುವ ವಾಕ್ಯಗಳಿಂದೆಂದು ಅಲಂಕಾರಿಕರು ಅಭಿಪ್ರಾಯ ಪಟ್ಟಿದ್ದಾರೆ. ಲೋಕದ ಮತ್ತು ಶಾಸ್ತ್ರದ ಭಾಷೆಯಲ್ಲಿ ಕಾಣದ ಉಕ್ತಿ ವೈಚಿತ್ರ್ಯ ಕಾವ್ಯಭಾಷೆಯಲ್ಲಿ ಕಂಡಿದ್ದರಿಂದ ಇದನ್ನು ಅಲಂಕಾರಿಕರು ಕಾವ್ಯದ ಸೌಂದರ್ಯ ಎಂದು ಗುರ್ತಿಸಿ; ಅಲಂಕಾರವೆಂದು ಕರೆದು; ಕಾವ್ಯವು ಅಲಂಕಾರದಿಂದಲೇ ಗ್ರಾಹ್ಯವಾಗುತ್ತದೆ ಎಂದರು. ಅಲಂಕಾರವನ್ನು ಕುರಿತು ವಾಮನನು 'ಕಾವ್ಯಂ ಗ್ರಾಹ್ಯಮಲಂಕಾರತ್ ಸೌಂದರ್ಯಮಲಂಕಾರಃ' ಎಂದಿದ್ದಾನೆ. ಆನಂದವರ್ಧನನು 'ಕವಿಯ ರಸಾನುಭಾವ ಅಭಿವ್ಯಕ್ತಿಗಳು ಮತ್ತು ಅವು ಕವಿಯ ಅನುಭವದಿಂದ ಪ್ರಯತ್ನಪೂರ್ವಕವಾಗಿ, ಸಹಜವಾಗಿ ಮತ್ತು ರಸೋಚಿತವಾಗಿ ಮೂಡಿದ ಅಭಿವ್ಯಕ್ತಿಗಳೇ ಅಲಂಕಾರಗಳು' ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುವನು. ಭಾಮಹನು 'ವಕ್ರಾಭಿಧೇಯವೇ ಅಲಂಕಾರ. ಅದಿಲ್ಲದೆ ಕಾವ್ಯಕ್ಕೆ ಸೊಗಸುಬಾರದು ಮತ್ತು ವಕ್ರತೆಯಿಲ್ಲದೆ ಉಕ್ತಿಗೆ ಕಾವ್ಯತ್ವವೇ ದಕ್ಕುವುದಿಲ್ಲ. ಕಾವ್ಯದಲ್ಲಿ ಸಹೃದಯನು ಮೆಚ್ಚುವುದು ಅಲಂಕಾರಗಳನ್ನೆ' ಎಂದಿರುವನು. ಅಲಂಕಾರಗಳ ಕುರಿತ ಆನಂದವರ್ಧನ ನಿಲುವನ್ನು ಉದ್ಧಟ, ರುದ್ರಟ, ಜಯದೇವ, ಅಪ್ಪಯದೀಕ್ಷಿತ ಮೊದಲಾದ ಅಲಂಕಾರಿಕರು ಅನುಮೋದಿಸಿದ್ದಾರೆ.

ಉಪಮಾಲಂಕಾರ ಅಲಂಕಾರಗಳಲ್ಲಿ ಉಪಮಾಲಂಕಾರಕ್ಕೆ ಶ್ರೇಷ್ಠಸ್ಥಾನವನ್ನು ನಮ್ಮ ಅಲಂಕಾರಿಕರು ನೀಡಿದ್ದಾರೆ. ಇದನ್ನು ಅಲಂಕಾರಗಳ ಶಿರೋರತ್ನ ಎಂದು ಕರೆದು, ಕಾವ್ಯ ಸಂಪತ್ತಿನ ಸರ್ವಸ್ವ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಎರಡು ಬೇರೆ ಬೇರೆ ವಸ್ತುಗಳ ನಡುವಣ ಸಾದೃಶ್ಯವನ್ನು ಹೇಳುವುದು ಈ ಅಲಂಕಾರದ ಲಕ್ಷಣವಾಗಿದೆ. ಇದನ್ನು ಕವಿಗಳು ಬಳಸುವುದು ವಿಷಯಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ಮಾತ್ರವಲ್ಲದೆ, ಒಂದು ಬಗೆಯ ಆಶ್ಚರ್ಯ, ಆನಂದವನ್ನುಂಟು ಮಾಡುವುದಕ್ಕಾಗಿ ಮತ್ತು ಸೌಂದರ್ಯದ ಅಂಶವನ್ನಾಗಿ ಬಳಸುತ್ತಾರೆ. ಕನಕದಾಸರ ಕಾವ್ಯ ರಚನೆಯಲ್ಲಿ ಸೌಂದರ್ಯ ತುಂಬಿ ಕಿವಿಗೆ ಇಂಪಾಗಿ, ಹೃದಯಕ್ಕೆ ಮಧುರವಾಗಿ, ಆಕರ್ಷಕವಾಗಿರಲು ಅವರ 'ಉಪಮಾ' ಅಲಂಕಾರದ ಪ್ರಜ್ಞೆಯೇ ಮುಖ್ಯವಾಗಿದೆ. ಕನಕದಾಸರು 'ಉಪಮಾಲಂಕಾರ ಪ್ರಿಯರು' ಅವರು ತಮ್ಮ ನಳಚರಿತ್ರೆಯಲ್ಲಿ ಉಪಮಾಲಂಕಾರಗಳನ್ನೇ ವಿಫುಲವಾಗಿ ಬಳಸಿಕೊಂಡಿದ್ದಾರೆ. ನಳಚಕ್ರವರ್ತಿಯ ವಿದರ್ಭ ಪಟ್ಟಣವನ್ನು ವರ್ಣಿಸುವಲ್ಲಿ ದಮಯಂತಿಯ ಸೌಂದರ್ಯವನ್ನು ಕುರಿತು ಪ್ರವಾಸಿ ಬ್ರಾಹ್ಮಣ ಮತ್ತು ಹಂಸ ಪಕ್ಷಿಗಳ ಮಾತುಗಳಲ್ಲಿ ಉಪಮಾಲಂಕಾರದ ಅಸ್ತಿತ್ವವನ್ನು ಕಾಣಬಹುದು. 'ಮುರಹರನ ನಿಜಸೊಸೆಗೆ ರೂಪಂ ತಿರಲಿ ಚಂದ್ರನ ಮಗಳ ಚೆಲುವಂತಿರಲಿ ಮೈನಾಕನ ಸಹೋದರಿಯಂದವಂತಿರಲಿ ಶರಧಿತನುಜೆಯ ಸೌಂದರ್ಯವನು ಮರಸಿತೆಂಬುದು ಲೋಕದೊಳಗಾ ಸರಸಿಜಾಕ್ಷಿಯ ಬಗೆಗೆ ಸರಿಯಿಲ್ಲಸಕೇಳೆಂದ' ಎಂದು ದಮಯಂತಿಯನ್ನು ವರ್ಣಿಸುವಲ್ಲಿ ಉಪಮೆಯನ್ನು ತಂದಿರುವುದನ್ನು ಕಾಣಬಹುದು. ಹಂಸವು ನಳನ ಕೈಯಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದ ಸಂದರ್ಭದಲ್ಲಿ ಅದು ನಳನನ್ನು ಉದ್ದೇಶಿಸಿ ಹೇಳುವ ಮಾತುಗಳು. 'ಮದಕರಿಗೆ ನೊರಜಂತರವೆ ಕೈ ಸದರದವರನು ಕೊಲುದೇನರಿದೆಂದುದಾ ಪಕ್ಷಿ ಕರಿಗಳನು ಮುರಿದಿಡುವ ಸಿಂಹಕೆ ನರಿಗಳಿದಿರೇ ತಾನು ನಿನಗಂ ತರವೆ ಸಾಕಂತಿರಲಿ ಕಂಡವರೆಲ್ಲ ಕಡುನಗರೆ' ಇಲ್ಲಿಯೂ ಸಹ ಉಪಮೆ ಇರುವುದನ್ನು ಕಾಣುತ್ತೇವೆ. ನಳನು ಜೂಜಿನಲ್ಲಿ ಎಲ್ಲವನ್ನು ಸೋತನು ಎಂದು ಸೇವಕನು ಬಂದು ಹೇಳಿದಾಗ ದಮಯಂತಿಯ ಮುಖ ಹೇಗಾಯಿತು 'ಕಮಲವನದಲಿ ಮಂಜು ಸುರಿದಾ' ಎಂದು ಹೇಳುವಲ್ಲಿ, ದಮಯಂತಿಯನ್ನು ಹೆಬ್ಬಾವು ನುಂಗುತ್ತಿರುವ ಸಂದರ್ಭದ ಚಿತ್ರವನ್ನು 'ಹಿಮಕರನ ನುಂಗುವ ರಾಹುವಿನ ವೊಲ್' 'ಗಗನವೀದಿಯ ತಾರಿಕೆಯವೋಲ್ ಸೊಗಸು ತೋರುವ ಕನ್ನಡಿಯ ಸಾಲುಗಳ ರತ್ನಪ್ರಭೆಗಳಲಿ ರಂಜಿಸುದುದಾ ನಗರ', 'ಅಮರೇಶನ ಸಭೆಯಂದದಲಿ ಮೆರೆದುದು ನೃಪತಿಯಾಸ್ಥಾನ', 'ನಳನ ಮಿತ್ರನ ತೇಜದ ವೊಲಿಳೆಗಿಳಿವ ಮಹಿಮರಕಂಡು', 'ಬಂದಳು ಸೀತಾಬ್ಜಳ ಲಕ್ಷ್ಮಿಯಂದದಲಿ', 'ಹೊಲಬುದಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತಾಗೆ ನಳನೃಪತಿಲಕ', 'ಎಳೆಯ ಬಾಳೆಯ ಸುಳಿಯು ಅನಲನ ಜಳದ ಹೊಯ್ಲಲಿ ನೊಂದ ವೊಲ್ ಕಡು ಬಳಲಿದಬಲೆಯ ಕಂಡು ನೃಪ ಮರುಗಿದನು', 'ಲೋಕಕಧಿಪತಿ ನಳನರಾಣಿಗೆ ಶೋಕ ಪರ್ಚಿದ ತೆರದಿ ಕತ್ತಲೆ ಲೋಕವನು ಮುಸುಕಿದುದು', 'ಬಾಲಕಿಯ ತರುಬಿ ಹಿಡಿದುದು ತವಕದಲಿ ಹಿಮಕರನ ನುಂಗುವ ರಾಹುವಿನವೊಲ್', 'ಸೃಷ್ಟಿಗಚ್ಚರಿ ರೂಪಿನಲಿ ಪರಮೇಷ್ಠಿಯಂದದಿ ಬಂದನಾ ಋತುಪರ್ಣನೋಲಗಕೆ', 'ಸದೆದನು ಬರಸಿಡಿಲು ಬಡಿದಂತೆ ರಿಪುಬಲ', 'ನೃಪರಾಜೀವಲೋಚನಂತೆ ಸಿಂಹಾಸನದಿ ರಂಜಿಸಿದ', 'ಗಾಳಿ ಮುರಿದೌಕಿದಡೆ ಘನಮೇ ಘಾಳಿ ನಿಲುವುದೇ', 'ದಿನಪನಿದಿರಲಿ ತಮದ ಹಾವಳಿಯೇ' ಮುಂತಾದುವುಗಳಲ್ಲಿ ಉಪಾಮಾಲಂಕಾರಗಳನ್ನು ಕಾಣಬಹುದು.

ರೂಪಕಾಲಂಕಾರ ಕನಕದಾಸರು 'ರೂಪಕ' ಅಲಂಕಾರವನ್ನೂ ಸಹ ತಮ್ಮ ಕಾವ್ಯಗಳಲ್ಲಿ ಸೃಷ್ಟಿಸಿರುವುದನ್ನು ಕಾಣಬಹುದು. ನಳಚರಿತ್ರೆಯ ಒಂಭತ್ತು ಸಂಧಿಗಳನ್ನೊಳಗೊಂಡ ಕಾವ್ಯದಲ್ಲಿ ಹಲವು ರೂಪಕಗಳನ್ನು ತಂದಿದ್ದಾರೆ. ಅವು 'ಹರಿಯ ಕಾರುಣ್ಯಂಬುಧಿಯೆ ಸಿರಿ' 'ಕರುಣರಸಧಾರೆಯಲಿ ತಾಪವ ಪರಿಹರಿಸಬೇಕೆಂದು', 'ತಳಿತ ಹರುಷಾನಂದದಲಿ', 'ಕರುಣಲತೆ ಕುಡಿದೋರಿತಾಕ್ಷಣ', 'ತನುಪುಳಕ ಜಲದಲಿ ಮುಳುಗಿಹೊಂಪುಳಿವೋಳಿ', 'ಒಲಿದಿಹಳು ಜಯವಧು', 'ಕಮಲನಾಭನಕರುಣ ಕವಚ್ರು ಸಮೆದರಾರೇಗುವರು', 'ಅಪಜಯದ ನಾರಿಯ ಸೆರಗ ಹಿಡಿದೆನು', 'ಶೋಕಜ್ವಾಲೆ ಪರಿಹಾರವಾಯ್ತು', 'ಮುಗಿಲು ಮುಸುಕಿದ ಚಂದ್ರಬಿಂಬವೊ', 'ಕೋಪಾಗ್ನಿ ಖತಿಮಸಗಿ', 'ನಿಷಧನ ಸೇರಿದಳು ಜಯಲಕ್ಷ್ಮಿ', 'ನೀ ಗೆಲಿದೊಡೀ ಭೂಲಲನೆಯನು ತಾ ಬಿಡದೆ', 'ತಮದ

ರಾಹುಗ್ರಹವು ಸೋಂಕಿದ್ಯುಮಣಿಯಂತಿರೆ', 'ಹೊಲಬುದಪ್ಪಿದಹುಲ್ಲೆಬೇಡನ ಬಲೆಗೆ ಬಿದ್ದಂತಾಗೆ', 'ಎಳೆಯ ಬಾಳೆಯ ಸುಳಿಯು ಅನಲನ ಜಳದ ಹೊಯ್ಲಲಿ', 'ರಸದ ಲೇಪದ ಮಿಸುನಿಯೊ ಮಲಿನವಸನದಲಿಹುದುಗಿರ್ದ ರತ್ನವೊ ನಸಿದ ಮೇಘದೊಳೆಸೆವ ಚಂದ್ರನ ಬಿಂಬದಂದದಲಿ', 'ಮುಗಿಲು ಮುಸುಕಿದ ಚಂದ್ರಬಿಂಬವೊ ಪಗಲೊಳೆವ ಸುದೀಪಕಾಂತಿಯೊ ಹೊಗೆಯೊಳೆಸಗಿದ ಚಿತ್ರಪ್ರತಿಮೆಯೊ' ಮುಂತಾದ ರೂಪಕಾಲಂಕಾರಗಳನ್ನು ಕಾಣಬಹುದು. ದೃಷ್ಟಾಂತಾಲಂಕಾರ ಕನಕದಾಸರು ತಮ್ಮ ಕೃತಿ ನಳಚರಿತ್ರೆಯಲ್ಲಿ ಕೆಲವು ದೃಷ್ಟಾಂತಗಳನ್ನು ತಂದು ಅರ್ಥಪೂರ್ಣಗೊಳಿಸಿದ್ದಾರೆ. 'ಮದಕರಿಗೆ ನೊರಜಂತರವೆ?', 'ಕರಿಗಳ ಮುರಿಡುವ ಸಿಂಹಕೆ ನರಿಗಳಿದಿರೇ', ಬಡಬಗೌತಣಯಿಕ್ಕುವಡೆಯೊಕ್ಕುಡಿತೆ ಹಾಲೆ?', ' ದಿನಪನಿದಿರಲಿ ತಮದ ಹಾವಳಿಯೇ', 'ಮುಂಗೈಗಂಗಣಕೆ ಕುಲದೀಪ ಕನ್ನಡಿಯೇಕೆ?', 'ಗಾಳಿ ಮುರಿದೌಕಿದೆಡೆ ಘನಮೇಘಾಳಿ ನಿಲುವುದೇ?' ಮುಂತಾದ ದೃಷ್ಟಾಂತಗಳನ್ನು ಸೃಷ್ಟಿಸಿದ್ದಾರೆ. ಸ್ವಭಾವೋಕ್ತ್ಯಾಲಂಕಾರ ದಾಸಶ್ರೇಷ್ಠರಾದ ಕನಕದಾಸರು ತಮ್ಮ ಕಾವ್ಯದಲ್ಲಿ ವರ್ಣನೆಗಳೊಂದಿಗೆ ಸ್ವಭಾವೋಕ್ತ್ಯಾಲಂಕಾರಗಳನ್ನು ತಂದಿದ್ದಾರೆ. 'ವನಿತೆ ಮಲಗಿಹಳೊ ಅಧೈರ್ಯದಿ ನೆನೆವಳೊ', 'ಬಿದಿರ ಮೆಳೆ ಧಗಧಗಿಸೆ ಘನ ಹೆಬ್ಬಿದಿರು ಛಟಿಛಟಿರೆನಲು', 'ಇಟ್ಟಫಣಿಯೊಳಗೆಸೆವ ಮಟ್ಟೆಯ', 'ದೊಡ್ಡಹೊಟ್ಟೆಯಗೂನು ಬೆನ್ನಿನ ಅಡ್ಡಮೋರೆಯ' ಮುಂತಾದ ವರ್ಣನೆಗಳಲ್ಲಿ ಬರುವ ಸ್ವಾಭಾವೋಕ್ತಿಗಳು ಹೃದ್ಯವಾಗಿವೆ. ಕವಿ ಕನಕದಾಸರು ತಮ್ಮ ಕೃತಿ/ಕಾವ್ಯ ನಳಚರಿತ್ರೆಯಲ್ಲಿ ಶಬ್ದಾಲಂಕಾರಳನ್ನು ಅಲ್ಲಲ್ಲಿ ಬಳಸಿದ್ದಾರೆ. 'ಕೆಲರು ಹದನೇನೆಂದು ಬಗೆದರು ಕೆಲರು ಪನ್ನೀರುಗಳ ತಳಿದರು', ಪದವಿಯಾವುದು ಲೋಕದಲಿ ಸುರಪದವಿಯಲ್ಲದೆ......', 'ಕಾಣಿರೇಯರಸಂಚೆಗಳೆ ನೀವ್, ಕಾಣಿರೆ ನಿಜಪತಿಯ ಶುಕಪಿಕ' ಮುಂತಾದ ಪದ್ಯಗಳಲ್ಲಿ 'ಯಮಕ'ವನ್ನು 'ದೊಡ್ಡ ಹೊಟ್ಟೆಯ ಗೂನು ಬೆನ್ನಿನ ಅಡ್ಡಮೋರೆಯ', 'ಇಟ್ಟ ಫಣಿಯೊಳಗೆಸೇವ ಮಟ್ಟೆಯ ತೊಟ್ಟ ಹೊಸ ಯಜ್ಞೋಪವೀತದ' ಮುಂತಾದ ಪದ್ಯಗಳಲ್ಲಿ ಅನುಪ್ರಾಸಗಳು ಕಿವಿಗೆ ಇಂಪನ್ನು ನೀಡುವವು. ಹೀಗೆ ಅಂದವಾಗಿ, ಮಿತವಾಗಿ ಸಂಯಮದಿಂದ ಅಲಂಕಾರಗಳನ್ನು ಬಳಸಿ ಭಾಷೆಗೆ ಒಂದು ರೀತಿಯ ಚೆಲುವನ್ನು, ಶಕ್ತಿಯನ್ನು ಕವಿ ತಂದಿದ್ದಾನೆ. ಕನಕದಾಸರು ತಮ್ಮ ನಳಚರಿತ್ರೆಯಲ್ಲಿ ವಿಫುಲವಾಗಿ ಉಪಮಾಲಂಕಾರವನ್ನು ಬಳಸಿರುವುದರಿಂದ 'ಉಪಮಾಲಂಕಾರ ಪ್ರಿಯ' ಎನ್ನಬಹುದು. ಉಪಸಂಹಾರ ನಳ ಚರಿತ್ರೆಯು ಮುಖ್ಯವಾಗಿ ಒಂದು ಕಥನಕಾವ್ಯವಾದರೂ ಇದರ ಒಡಲಲ್ಲಿ ಮತ್ತೆ ಉಪಕಥೆಗಳು ಪ್ರವೇಶ ಪಡೆದಿಲ್ಲ. ಶೃಂಗಾರವನ್ನು ಮಿತವಾಗಿ ಬಳಸಿ ಹೇಳಬೇಕಾದ ವಿಷಯವನ್ನು ತಿಳಿಸಲು ಬಳಸಿರುವ ಅಲಂಕಾರಗಳು ಹೆಚ್ಚಾಗಿಲ್ಲ. ಉಪಮೆ, ರೂಪಕ, ಸ್ವಭಾವೋಕ್ತಿ, ದೃಷ್ಟಾಂತಾಲಂಕಾರ, ಅನುಪ್ರಾಸ, ಯಮಕಗಳಿಗೆ ಅವಕಾಶ ಸಿಕ್ಕಿದೆ. ಕನಕದಾಸರು ಉತ್ಪ್ರೇಕ್ಷೆ, ಅತಿಯೋಕ್ತಿಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿಲ್ಲ. ಸಂಯಮದಿಂದ ತೂಗಿ ತೂಗಿ ಬರೆಯಲು ದಾಸಶ್ರೇಷ್ಠರಾದ ಕನಕದಾಸರು ಭಕ್ತ ಕವಿಯಾಗಿದ್ದನೆಂಬ ಮಾತು ಸ್ಪಷ್ಟವಾಗುತ್ತದೆ. ಕುಮಾರವ್ಯಾಸನಂತೆ ನಿರಾಯಾಸವಾಗಿ ಭಾಮಿನಿಷಟ್ಪದಿಯನ್ನು ಬಳಸಿದ್ದಾರೆ. ನಳಚರಿತ್ರೆಯ ಜನಪ್ರಿಯತೆಗೆ ಭಾಮಿನಿಷಟ್ಪದಿಯ ಸೊಗಸು, ಶಬ್ದ ಚಿತ್ರಗಳು, ಶಬ್ದಾರ್ಥಕ್ಕೆ ಕಳೆಗೊಡುವ ಉಪಮೆ ಹಾಗೂ ರೂಪಕಗಳು ಕಾರಣವಾಗಿವೆ.

ಪರಾಮರ್ಶನ ಗ್ರಂಥಗಳು

೧. ಅಂಬಲಿಯವರ.ಎನ್.ಎಂ;೧೯೯೫, ದಾಸಶ್ರೇಷ್ಠ ಕನಕದಾಸರ ನಳಚರಿತ್ರೆ (ಪದ್ಯ ಗದ್ಯಾನುವಾದ ಸಹಿತ), ವಿದ್ಯಾನಿಧಿ ಪ್ರಕಾಶನ, ಗದಗ.

೨. ಕಾಡದೇವರಮಠ.ಎಲ್.ಎಸ್;೧೯೯೫, ದಾಸಶ್ರೇಷ್ಠ ಕನಕದಾಸರ ನಳಚರಿತ್ರೆ, ವಿದ್ಯಾನಿಧಿ ಪ್ರಕಾಶನ, ಗದಗ.

೩. ಜವರೇಗೌಡ.ದೇ;೨೦೧೧, ಕನಕದಾಸ ವಿರಚಿತ ನಳಚರಿತ್ರೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೪. ನದಾಫ.ಎಚ್.ಎಚ್ ಮತ್ತು ರವಿ.ಬಿ.ಕೆ:೨೦೧೪, ಕನಕದಾಸರ ಸಮಗ್ರ ಕಾವ್ಯಾಧ್ಯಯನ:ಭಾಗ–೨ ನಳಚರಿತ್ರೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಬಿರಾದಾರ.ಬಿ.ಬಿ;೨೦೦೮, ನಳಚತ್ರೆ ; ಒಂದು ಹೊಸನೋಟ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ಮರುಳಯ್ಯ.ಸಾ.ಶಿ;೨೦೧೨, ಕನಕ ಸಾಹಿತ್ಯ ದರ್ಶನ ಸಂಪುಟ–೨ ಕನಕದಾಸರ ಕಾವ್ಯ ಭಾಗ–೧ (ಹರಿಭಕ್ತಿಸಾರ, ರಾಮಧಾನ್ಯ ಚರಿತ್ರೆ ಮತು ನಳಚರಿತ್ರೆ), ಕನ್ನಡ ಮತು ಸಂಸ್ಕೃತಿ ಇಲಾಖೆ, ಬೆಂಗಳೂರು.

೭. ನದಾಫ.ಎಚ್.ಎಚ್;೨೦೦೭, ಕನಕದಾಸರ ಕೃತಿಗಳು ಜಾನಪದೀಯ ಅಧ್ಯಯನ, ಸಿರಾ ಪಬ್ಲಿಷಿಂಗ್ ಹೌಸ್, ಮೈಸೂರು.